# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1149 (922) |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |
| ಉತ್ತರಿಸುವ ದಿನಾಂಕ | : | 29.09.2020 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (VTPC)ವನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಧ್ಯೇಯೋದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು) | ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವನ್ನು 1971ನೇ ಇಸವಿಯಲ್ಲಿ ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಪ್ರಮುಖ ಧ್ಯೇಯೋದ್ದೇಶಗಳ ವಿವರ ಈ ಕೆಳಗಿನಂತಿದೆ.<br>1. ರಾಜ್ಯದಿಂದ ರಫ್ತನ್ನು ಹೆಚ್ಚಿಸುವ ದೃಷ್ಟಿಯಿಂದ ರಫ್ತಿಗೆ ಸಂಬಂಧಿಸಿದ ಪಾಲುದಾರರ ಸಭೆಗಳನ್ನು ಜರುಗಿಸುವುದು, ರಫ್ತು ಉತ್ತೇಜನ ಕಾರ್ಯಕ್ರಮಗಳನ್ನು ಜರುಗಿಸುವುದು. ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿನ ರಫ್ತು ಉತ್ತೇಜನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದು.<br>2. ರಫ್ತಿನ ಬಗ್ಗೆ ಮಾಹಿತಿ ಸಂಗ್ರಹಿಸುವುದು ಹಾಗೂ ಅಧ್ಯಯನ ಕೈಗೊಳ್ಳುವುದು.<br>3. ರಫ್ತು ಮಾಹಿತಿಯನ್ನು ಕಲೆಹಾಕಿ ಸಂಸ್ಥೆಯ ನೊಂದಾಯಿತ ಸದಸ್ಯರಿಗೆ ಅರಿವು ಮೂಡಿಸುವುದು.<br>4. ರಫ್ತು ಜಾಗೃತಿ ಕಾರ್ಯಕ್ರಮಗಳನ್ನು ಹಾಗೂ ರಫ್ತು ನಿರ್ವಹಣೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.<br>5. ವ್ಯಾಪಾರಾಭಿವೃದ್ಧಿಗಾಗಿ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದು ಹಾಗೂ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸುವುದು.<br>6. ರಫ್ತು ಘಟಕಗಳ, ವಿಶೇಷ ಆರ್ಥಿಕ ವಲಯಕ್ಕೆ ಸಂಬಂಧಿಸಿದ ರಾಜ್ಯದ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಣೆ.<br>7. ಭೌತಿಕ ಆಸ್ತಿ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸುವುದು.<br>8. ಭೌಗೋಳಿಕ ಉಪಲಬ್ದಗಳಿಗೆ ಸಂಬಂಧಿಸಿದಂತೆ ರಾಜ್ಯದ ನೋಡಲ್ ಸಂಸ್ಥೆಯಾಗಿ ಕೆಲಸ ನಿರ್ವಹಿಸುವುದು.<br>9. ರಾಜ್ಯ ರಫ್ತು ಶ್ರೇಷ್ಠ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳನ್ನು ಆಯೋಜಿಸುವುದು / ಭಾಗವಹಿಸುವುದು.<br>10. ಸರ್ಕಾರದ ಕೈಗಾರಿಕಾ ನೀತಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವುದು. |
| ಆ) | ಕಸ್ತೂರಿಬಾ ರಸ್ತೆಯಲ್ಲಿರುವ ಸ್ವಂತ ಕಟ್ಟಡದ ಕೇಂದ್ರ ಕಛೇರಿಯನ್ನು ಶಾಂತಿನಗರದ ಬಾಡಿಗೆ ಕಟ್ಟಡಕ್ಕೆ | ಸಂಸ್ಥೆಯ ಕಾರ್ಯಕ್ರಮಗಳನ್ನು ಜರುಗಿಸಲು ಕಸ್ತೂರಬಾ ರಸ್ತೆಯ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಗಳನ್ನು ಸ್ಥಳಾಂತರಿಸಿದರೆ ಕೆಲಸಗಳಿಗೆ ತೊಂದರೆಯಾಗಬಹುದೆಂದು ಹಾಗೂ ಉದ್ದೇಶಿತ ಕೆಲಸ ಕಾರ್ಯಗಳಿಗೆ |

| | | |
|---|---|---|
| | ಸ್ಥಳಾಂತರಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಸ್ಥಳದ ಅಭಾವವಾದ ಹಿನ್ನೆಲೆಯಲ್ಲಿ ಸಂಸ್ಥೆಯ ಕೇಂದ್ರ ಕಛೇರಿಯನ್ನು ಶಾಂತಿನಗರ ಕಟ್ಟಡಕ್ಕೆ ಸ್ಥಳಾಂತರಿಸಲಾಗಿತ್ತು.<br><br>ರಫ್ತು ಉತ್ತೇಜನ ಕಾರ್ಯಕ್ರಮಗಳು, WTO/IPR ಕಾರ್ಯಕ್ರಮಗಳು, SEZನ ಕೆಲಸ ಕಾರ್ಯಗಳು, ಸೇವಾಕೇಂದ್ರ ಮತ್ತು ಸಾಮರ್ಥ್ಯಕಟ್ಟುವ ಕಾರ್ಯಕ್ರಮಗಳನ್ನು ಆಯೋಜಿಸಲು ಕಛೇರಿಯನ್ನು ಸ್ಥಳಾಂತರಿಸಲಾಗಿತ್ತು. |
| ಇ) | ಶಾಂತಿನಗರದ ಕಚೇರಿಯ ವಾರ್ಷಿಕ ಬಾಡಿಗೆ ಎಷ್ಟು; ಈಗಾಗಲೇ ಎಷ್ಟು ಹಣ ಪಾವತಿ ಮಾಡಲಾಗಿದೆ; ಈ ಹಣದಲ್ಲಿ ಕಸ್ತೂರಿಬಾ ರಸ್ತೆಯಲ್ಲಿರುವ ಸುಸಜ್ಜಿತ ಸ್ವಂತ ಕಟ್ಟಡವನ್ನು ನಿರ್ಮಿಸಬಹುದಿತ್ತಲ್ಲವೆ; (ವಿವರವಾದ ಮಾಹಿತಿ ನೀಡುವುದು) | 2019–20ನೇ ಸಾಲಿನಲ್ಲಿ ಶಾಂತಿನಗರ ಕಛೇರಿಯ ವಾರ್ಷಿಕ ಬಾಡಿಗೆ ರೂ.65,21,603/- ಗಳಾಗಿರುತ್ತದೆ. ಈ ಹಣವನ್ನು ಸಂಪೂರ್ಣವಾಗಿ ಪಾವತಿಸಲಾಗಿದೆ. |
| ಈ) | ರಾಜ್ಯದಲ್ಲಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (VTPC) ದಲ್ಲಿರುವ ಆಸ್ತಿಗಳು ಎಷ್ಟು; ಅವುಗಳು ಎಲ್ಲೆಲ್ಲಿ ಇವೆ; ಅವುಗಳ ಇವತ್ತಿನ ಮೌಲ್ಯವೇನು; ಇವುಗಳನ್ನು ಯಾರಾದರೂ ಒತ್ತುವರಿ ಮಾಡಿದ್ದಾರೆಯೇ; (ವಿವರವಾದ ಮಾಹಿತಿ ನೀಡುವುದು) | ವಿಟಿಪಿಸಿ ಸಂಸ್ಥೆಯು ಒಟ್ಟು ಮೂರು ಆಸ್ತಿಗಳನ್ನು ಹೊಂದಿರುತ್ತದೆ.<br>ಕಸ್ತೂರಬಾ ರಸ್ತೆ, ಬೆಂಗಳೂರು, ಪೀಣ್ಯ, ಬೆಂಗಳೂರು ಹಾಗೂ ಕಣಬರ್ಗಿ ಕೈಗಾರಿಕಾ ಪ್ರದೇಶ, ಬೆಳಗಾವಿಯಲ್ಲಿ ಇರುತ್ತವೆ.<br>ಇವುಗಳ ಇವತ್ತಿನ ಮೌಲ್ಯದ ಬಗ್ಗೆ ಮಾಹಿತಿ ಇರುವುದಿಲ್ಲ.<br>ಇವುಗಳನ್ನು ಯಾರೂ ಒತ್ತುವರಿ ಮಾಡಿಕೊಂಡಿರುವುದಿಲ್ಲ. |
| ಉ) | ಕಳೆದ 3 ವರ್ಷಗಳಲ್ಲಿ ಈ ಸಂಸ್ಥೆಯು ಖರ್ಚು ಮಾಡಿದ ಹಣವೆಷ್ಟು; ಮೂರು ವರ್ಷಗಳಲ್ಲಿ ಸಂಸ್ಥೆಯ ಕೊಡುಗೆ ಏನು; ಯಾವ ಯಾವ ಕಾರ್ಯಕ್ರಮಗಳನ್ನು ಮಾಡಲಾಗಿದೆ? (ವಿವರವಾದ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ವಿಟಿಪಿಸಿ ಸಂಸ್ಥೆಯ ಮೂಲಕ ರಫ್ತು ಜಾಗೃತಿ ಶಿಬಿರ, ರಫ್ತು ನಿರ್ವಹಣೆ ತರಬೇತಿ ಕಾರ್ಯಕ್ರಮ, ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುದು, ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಒದಗಿಸುವುದು, ಪಾಲುದಾರರ ಸಭೆಗಳನ್ನು ಜರುಗಿಸುವುದು, ಎಕ್ಸ್‌ಪೋರ್ಟ್ ಸ್ಟ್ರಾಟೆಜಿ ತಯಾರಿಸುವುದು, ಭೌಗೋಳಿಕ ಗುರುತುಗಳ ನೀತಿ ಹೊರತರುವುದು, ಸರ್ವೀಸಸ್ ಎಕ್ಸ್‌ಪೋರ್ಟ್ ಸ್ಟ್ರಾಟೆಜಿ ಹೊರತರುವುದು, ಭೌತಿಕ ಆಸ್ತಿ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು, ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳನ್ನು ಪ್ರದಾನ ಮಾಡುವುದು, ಭೌತಿಕ ಆಸ್ತಿ ಹಕ್ಕುಗಳ WTO/IPR ಬಗ್ಗೆ ಜಾಗೃತಿ ಕಾರ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸುವುದು, ಭೌಗೋಳಿಕ ಉಪಲಬ್ಧಗಳಿಗೆ ಸಂಬಂಧಿಸಿದಂತೆ ಜಾಗೃತಿ ಕಾರ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸುವುದು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ರಫ್ತು ಉತ್ತೇಜನ ಕಾರ್ಯಕ್ರಮಗಳಿಗೆ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುವುದು.<br><br>ಸಂಸ್ಥೆಯಿಂದ ಖರ್ಚು ಮಾಡಿದ ಹಣದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |

ಸಿಐ ಎಸ್‌ಪಿಐ 2020

**(ಜಗದೀಶ್ ಶೆಟ್ಟರ್)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

## Annexure to LC Q No. 922 (1149)

| | | |
|---|---|---|
| ಪ್ರಶ್ನೆ ಸಂಖ್ಯೆ | : | 922 (1149) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ.ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು |
| ಉತ್ತರಿಸುವ ದಿನಾಂಕ | : | 29-09-2020 |
| ವಿಷಯ | : | ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಸ್ಥಾಪನೆ ಉದ್ದೇಶ ಹಾಗೂ ಮಹತ್ವದ ಬಗ್ಗೆ. |

**Statement showing the details of Budget received and Expenditure in respect of the schemes implemented during 2017-18 to 2019-20**

Rs. in Lakhs

| No | Head of account | Grant received | Expenditure | Remarks |
|---|---|---|---|---|
| 2017-18 | 2852-80-102-0-02 (125) Export and Trade Promotion | 900 | 539.12 | Export and Trade programmes, Peenya Building Property Tax, Mysore Export Bhavan, MSME Awards, Upgradation/Modernization of Marine Processing Project,Tadadi. |
| 2018-19 | 2852-80-102-0-02 (125) Export and Trade Promotion | 680 | 373.08 | Export and Trade programmes, MSME Awards, Logistic Policy, Upgradation / Modernization of Marine Processing Project,Tadadi. |
| 2019-20 | 2852-80-102-0-02 (125) Export and Trade Promotion | 300 | 557.66 | Export and Trade programmes. |
| | | | | |
| 2018-19 | 2852-80-102-0-03 (059) Assistance to Institutions and Other expenses | 127 | 77 | Export Grants, Administrative Grants. |
| 2019-20 | 2852-80-102-0-03 (059) Assistance to Institutions and Other expenses | 100 | 100 | Administrative Grants. |
| | | | | |
| 2018-19 | 2852-80-102-0-04 (059) Compete with China | 500 | 123.87 | Compete with China |
| 2019-20 | 2852-80-102-0-04 (059) Compete with China | 500 | 637.39 | Compete with China |
| | | | | |
| 2017-18 | 4851-00-102-0-09 (132) Specialized skill Development Institutions | 384 | 4.70 | Cashew Technology Development Centre, Kumta. |

...2

| No | Head of account | Grant received | Expenditure | Remarks |
|---|---|---|---|---|
| 2018-19 | 4851-00-102-0-09 (132) Specialized skill Development Institutions- | 0 | 100 | Cashew Technology Development Centre, Kumta. |
| 2019-20 | 4852-80-190-0-01 (211) Industrial Infrastructure for Institutions-Investment | 215 | 363.39 | Cashew Technology Development Centre, Kumta. |
| | | | | |
| 2019-20 | 2852-80-102-0-02 (059) GES-2019 | 1342.71 | 1342.71 | Global Exhibition on Services - 2019 |